**<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>**

ಸಿ.ಸಿ. ನಂ. 206/2015

ಸಿಡಬ್ಲ್ಯೂ -1 ಪಿಡಬ್ಲ್ಯೂ -1

ಹೆಸರುಃ ಗಂಗಯ್ಯ
ತಂದೆಯ ಹೆಸರುಃ ಗಜದಂಡಯ್ಯ
ವಯಸ್ಸುಃ 66 ವರ್ಷ
ಉದ್ಯೋಗಃ ನಿವೃತ್ತರು
ವಾಸ ಸ್ಥಳಃ ಹೈದ್ರಾಬಾದ್

ದಿನಾಂಕ 08-08-2024

ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ಈಗ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆಯು ಪಿರ್ಯಾದು ಆಗಿದ್ದು ಸದರಿಯನ್ನು ನಿ ಪಿ 1 ಎಂದು , ದಾಖಲೆಯ ಮೇಲಿರುವ ಸಹಿಯನ್ನು ಸಾಕ್ಷಿಯು ತಮ್ಮದೆಂದು ನೋಡಿ ಗುರುತಿಸಿದರ ಮೇರೆಗೆ ಸಹಿಯನ್ನು ನಿ ಪಿ 1 (ಎ) ಎಂದು ಗುರುತಿಸಲಾಯಿತು. ಈಗ ಕಳೆದ 2014-15 ನೇ ಸಾಲಿನಲ್ಲಿ ಬಸ್ ಪಾಸ್ ವಿತರಕನಾಗಿ ಸೇಡಂ ಬಸ್ ಸ್ಟಾಂಡ್ ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದೆ. ಪಾಸುಗಳನ್ನು ನಕಲು ಮಾಡಿರುವುದು ಗೊತ್ತಾಯಿತು ಆದರೆ ಯಾರು ಮಾಡಿದ್ದು ಅಂತ ನನಗೆ ಗೊತ್ತಿಲ್ಲ. ನಮ್ಮ ಮೇಲ್ವಿಚಾರಕರು ಬಂದು ವಿಚಾರಿಸಿ ನೋಡಲಾಗಿ ಕೆಲ ಪಾಸುಗಳು ನಕಲಾಗಿರುವುದು ಕಂಡು ಬಂದಿತ್ತು. ಇದಾದ ನಂತರ ನಾನು ಪೋಲೀಸ್ ಠಾಣೆಗೆ ಹೋಗಿ ಸಹಿ ಮಾಡಿರುತ್ತೇನೆ. ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ. ಪೋಲೀಸ್ ಠಾಣೆಗೆ ನಾನು ಮತ್ತು ಸೇಕರೇಟರಿಯವರು ಬಂದಿರುತ್ತಾರೆ.

1. ಈಗ ಸಾಕ್ಷಿಗೆ 3 ದಾಖಲೆಗಳನ್ನು ತೋರಿಸಿ ಸದರಿ ದಾಖಲೆಗಳು ಪಾಸ್‌ಗಾಗಿ ಅರ್ಜಿಗಳಾಗಿದ್ದು ಸದರಿ ದಾಖಲೆಗಳನ್ನು ನಿ ಪಿ 2 ರಿಂದ 4 ಎಂದು ಗುರುತಿಸಲಾಯಿತು.
2. ಈಗ ಸಾಕ್ಷಿಗೆ 3 ದಾಖಲೆಗಳನ್ನು ತೋರಿಸಿ ಸದರಿ ದಾಖಲೆಗಳು ಆರೋಪಿತರು ಕೊಟ್ಟ ದಾಖಲೆಗಳು ಆಗಿದ್ದು ಅದು ಎನ್ ಟಿ ಕಾಲೇಜಿಗೆ ಕಟ್ಟಿರುವ ಶುಲ್ಕದ ರಶೀದಿಗಳಾಗಿದ್ದು ದಾಖಲೆಗಳನ್ನು ನಿ ಪಿ 5 ರಿಂದ 7 ಎಂದು ಗುರುತಿಸಲಾಯಿತು.
3. ಈಗ ಸಾಕ್ಷಿಗೆ 3 ದಾಖಲೆಗಳನ್ನು ತೋರಿಸಿ ಸದರಿ ದಾಖಲೆಗಳು ಆರೋಪಿತರು ಕೊಟ್ಟ ದಾಖಲೆಗಳು ಆಗಿದ್ದು ಅದು ವಾಸಸ್ಥಳದ ಧೃಡೀಕರಣವಾಗಿದ್ದು ದಾಖಲೆಗಳನ್ನು ನಿ ಪಿ 8 ರಿಂದ 10 ಎಂದು ಗುರುತಿಸಲಾಯಿತು.

(ಈಗ ಸಾಕ್ಷಿಯನ್ನು ಭಾಗಷಹ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸ ಸ ಅ ರವರು ಪಾಟಿ ಸವಾಲು ಮಾಡಲು ಕೋರಿದ್ದು ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ನಾನು ಬಸ್ ನಿಲ್ದಾಣದಲ್ಲಿ ಪಾಸು ವಿತರಿಕನಾಗಿ ಕೆಲಸ ಮಾಡುತ್ತಿದ್ದಾಗ 2014-15 ನೇ ಸಾಲಿನಲ್ಲಿ ಆರೋಪಿತರು ಎನ್ ಟಿ ಕಾಲೇಜಿನ ಪ್ರಾಚಾರ್ಯರು ಶಿಫಾರಸ್ಸು ಮಾಡಿದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ವಿದ್ಯಾರ್ಥಿ ರಿಯಾಯಿತಿ ಬಸ್ಸು ಪಾಸು ಪಡೆದಿರುತ್ತಾರೆ ಎಂದರೆ ಸರಿ. ಇವುಗಳನ್ನು ನಾನು ಮತ್ತು ವಿಭಾಗೀಯ ಭದ್ರತಾ ನಿರೀಕ್ಷಕರೊಂದಿಗೆ ಸಂಬಂದ ಪಟ್ಟ ಕಾಲೇಜಿಗೆ ಹೋಗಿ ವಿಚಾರಿಸಿದಾಗ ಆರೋಪಿತರು ಸದರಿ ಕಾಲೇಜಿನಿಂದ ವಿದ್ಯಾರ್ಥಿಗಳು ಇರದೇ ಇರುವುದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆಗೆ ಕಾಲೇಜಿಗೆ ಹೋಗಿ ವಿಚಾರಿಸಲು ಭದ್ರತಾ ನೀರೀಕ್ಷಕರು ಮಾತ್ರ ಹೋಗಿದ್ದರು ನಾನು ಹೋಗಿರಲಿಲ್ಲ ಎಂದು ನುಡಿಯುತ್ತಾರೆ. ದಿ.08-11-2014 ಸುಮಾರು 09-30 ರಾತ್ರಿ ನಾನು ಆರೋಪಿತರ ವಿರುದ್ದ ಪೋಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿದ್ದೆ ಎಂದರೆ ಸರಿ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಪ್ರ.ದ.ನ್ಯಾ.ದಂ.ಸೇಡಂ.

ಮಾನ್ಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ನ್ಯಾಯಾಲಯ,